# ಬಸವಣ್ಣನವರ ಪರಿವರ್ತನಾತ್ಮಕ ಮನೋಧರ್ಮ: ಅಂದು-ಇಂದು-ಮುಂದು

**ಚಂದ್ರಶೇಖರ ಎನ್.ಪಿ.**

ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

DOI: https://doi.org/10.5281/zenodo.17773518

## ABSTRACT:

ಬಸವಣ್ಣನವರ ಪರಿವರ್ತನಾತ್ಮಕ ಮನೋಧರ್ಮ ಮತ್ತು 12ನೇ ಶತಮಾನದಲ್ಲಿ ಅವರು ಮಾಡಿದ ಸಾಮಾಜಿಕ ಸುಧಾರಣೆಗಳ ಪ್ರಸ್ತುತತೆಯನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಬಸವಣ್ಣನವರು ವೇದ, ಶಾಸ್ತ್ರಾಧಾರಿತ ವೈದಿಕ ಪುರೋಹಿತಶಾಹಿಯ ದಬ್ಬಾಳಿಕೆ, ಜಾತಿ ಮತ್ತು ಲಿಂಗ ತಾರತಮ್ಯವನ್ನು ಧಿಕ್ಕರಿಸಿ ಅನುಭವ ಮಂಟಪ ಎಂಬ ಪ್ರಜಾಸತ್ತಾತ್ಮಕ ವೇದಿಕೆಯನ್ನು ಸ್ಥಾಪಿಸಿದರು. ಇದು ಶೋಷಿತ ಸಮುದಾಯ ಮತ್ತು ಮಹಿಳೆಯರಿಗೆ ಆತ್ಮಗೌರವ, ಸಮಾನ ಹಕ್ಕು, ಲಿಂಗ ಸಮಾನತೆ ಮತ್ತು ಮುಕ್ತ ಅಭಿವ್ಯಕ್ತಿ ಒದಗಿಸಿತು. ಕಾಯಕವೇ ಕೈಲಾಸ ಮತ್ತು ದಾಸೋಹ ತತ್ವಗಳನ್ನು ಪ್ರತಿಪಾದಿಸುವ ಮೂಲಕ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಮಾನತೆಗಾಗಿ ಶ್ರಮಿಸಿದರು. ಬಸವಣ್ಣನವರ ತತ್ವಗಳು ಮತ್ತು ವಚನ ಸಾಹಿತ್ಯದ ಮುಕ್ತ ಚಿಂತನೆಗಳು ಇಂದಿನ ಮಹಿಳಾ ಅಸಮಾನತೆ, ಭ್ರಷ್ಟಾಚಾರ ಮತ್ತು ಭಯೋತ್ಪಾದನೆಯಂತಹ ಜಾಗತಿಕ ಸವಾಲುಗಳಿಗೆ ಪರಿಹಾರ ಒದಗಿಸುವಲ್ಲಿ ಸಾರ್ವಕಾಲಿಕ ಪ್ರಸ್ತುತತೆಯನ್ನು ಹೊಂದಿವೆ ಎಂದು ಲೇಖನವು ಪ್ರತಿಪಾದಿಸುತ್ತದೆ.

## KEYWORDS:

ಬಸವಣ್ಣ, ಅನುಭವ ಮಂಟಪ, ವಚನ ಸಾಹಿತ್ಯ, ಕಾಯಕ-ದಾಸೋಹ, ಸಾಮಾಜಿಕ ಪರಿವರ್ತನೆ.

**ಪೀಠಿಕೆ:**

ವೇದ, ಶಾಸ್ತ್ರಗಳು ದೇವರ ಸೃಷ್ಟಿ, ಅವುಗಳನ್ನು ಓದಿ ಕರಗತ ಮಾಡಿಕೊಂಡಿರುವ ಶ್ರೇಷ್ಠ ಕುಲದವರಿಗೆ ಮಾತ್ರ ದೇವರನ್ನು ಕಾಣುವುದು ಸಾಧ್ಯ, ಉಳಿದ ಜಾತಿ,ಕುಲಗಳ ಜನರು ಮೇಲ್ವರ್ಗದವರ ಸೇವೆ ಮಾಡುವುದೇ ದೇವರ ಸೇವೆ. ಸಂಸ್ಕೃತ ಓದುವುದು ಎಂದರೆ ಬ್ರಾಹ್ಮಣರಿಗೆ ಮಾತ್ರ ಸೀಮಿತ. ಅದರಲ್ಲೂ ಮಹಿಳೆಯರೂ ಸೇರಿದಂತೆ ದೇವರನ್ನು ಪೂಜಿಸುವುದು ಶಾಪ ಎಂದೆಲ್ಲ ಅವೈಜ್ಞಾನಿಕ ಕಟ್ಟು ಪಾಡುಗಳನ್ನು ಹಾಕಿ ಬಡಜನರನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದ 12ನೇ ಶತಮಾನದ ಸಮಾಜದಲ್ಲಿ ಶೋಷಿತ ಸಮುದಾಯದ ಆಶಾಕಿರಣದಂತೆ ಬಂದು ಕತ್ತಲಿನಿಂದ

ಕವಿದಿದ್ದ ಜನರ ಮನೋಮಂದಿರಗಳಿಗೆ ಜ್ಞಾನದ ಪ್ರಕಾಶವನ್ನು ಬೆಳಗಿ ಆತ್ಮ ಗೌರವ, ಸತ್ಯ ಶುದ್ಧ ಬದುಕಿಗೆ ಅಗತ್ಯವಾದ ಕಾಯಕ, ದಾಸೋಹ, ಮೇಲು ಕೀಳು ರಹಿತ ಸಮಾನತೆ ಸಮಾಜದ ನಿರ್ಮಾತೃ ವಿಶ್ವದ ಶ್ರೇಷ್ಠ ಮಾನವತಾವಾದಿ ಬಸವಣ್ಣನವರು. 900 ವರ್ಷಗಳ ಹಿಂದೆ ಅವರು ಮಾಡಿದ ಪರಿವರ್ತನೆ ಇಂದಿಗೂ ಮುಂದೆಂದಿಗೂ ಎಲ್ಲ ನಾಗರೀಕ ಸಮಾಜಗಳ ಆದರ್ಶಪ್ರಾಯ.

ಅಂದು- ಹನ್ನೊಂದನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು ಹನ್ನೆರಡನೇ ಶತಮಾನದ ಪೂರ್ವದಲ್ಲಿನ ಕರ್ನಾಟಕದ ರಾಜಕೀಯ ಸಾಮಾಜಿಕ ಪರಿಸ್ಥಿತಿ ಆಕ್ಟೊಪಸ್ ನಂತಹ ವೈದಿಕ ಹನ್ನೊಂದನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು ಹನ್ನೆರಡನೇ ಶತಮಾನದ ಪೂರ್ವದಲ್ಲಿನ ಕರ್ನಾಟಕದ ರಾಜಕೀಯ ಸಾಮಾಜಿಕ ಪರಿಸ್ಥಿತಿ ಅವಲೋಕಿಸಿದಾಗ ಸಮಾಜದಲ್ಲಿನ ಕೆಳ ವರ್ಗ ಮತ್ತು ಬಡಜನರ ಶೋಷಣೆಗೆ ಕಾರಣರಾಗಿದ್ದ ಪುರೋಹಿತಶಾಹಿ ಮತ್ತು ಅವರು ಮಾಡುವ ಅನ್ಯಾಯಗಳಿಗೆ, ವೇದ, ಶಾಸ್ತ್ರ, ಆಗಮಗಳನ್ನ ಆಧಾರವನ್ನಾಗಿರಿಸಿಕೊಂಡು ಸಮಾಜದಲ್ಲಿ ಮೇಲು ಕೀಳು, ಲಿಂಗ ತಾರತಮ್ಯ,ಬಡತನ ಹಾಗೂ ಧಾರ್ಮಿಕ ಶೋಷಣೆ, ದಬ್ಬಾಳಿಕೆ ಮೇರೆಮೀರಿತ್ತು. ಮೇಲ್ವರ್ಗದವರ ಆ ದಬ್ಬಾಳಿಕೆಯನ್ನು ಪ್ರಶ್ನಿಸುವ ಮತ್ತು ಅವರ ದೌರ್ಜನ್ಯವನ್ನು ಧಿಕ್ಕರಿಸಿ, ಸಮಾಜದಲ್ಲಿ ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಸಮಾನತೆಯನ್ನು ಸಾಧಿಸಿ, ಸಮಾಜದಲ್ಲಿ ಮೇಲು- ಕೀಳು,ಹೆಣ್ಣು - ಗಂಡು, ಬಡವ-ಶ್ರೀಮಂತ ಎಂಬ ಯಾವ ಭೇದವೂ ಇಲ್ಲದೆ ಪ್ರತಿಯೊಂದು ವರ್ಗದ ಸ್ತ್ರೀ- ಪುರುಷರಿಗೂ ತಮ್ಮ ತಮ್ಮ ಕಾಯಕ ಮಾಡುವ, ತಮ್ಮ ಸುಖ ದುಖಗಳನ್ನು ಅಭಿವ್ಯಕ್ತಿಪಡಿಸುವ, ಪರಸ್ಪರ ಚರ್ಚಿಸುವ ಮುಕ್ತ ಅವಕಾಶವನ್ನು ಒದಗಿಸಿಕೊಟ್ಟು ಅಂದಿನ ಸಮಾಜದಲ್ಲಿ ಗುಣಾತ್ಮಕ ಪರಿವರ್ತನೆ ತರುವುದು ಅಗತ್ಯವಾಗಿತ್ತು. ಇದಕ್ಕಾಗಿ ಬಸವಣ್ಣನವರು ರೂಪಿಸಿಕೊಟ್ಟ ಪ್ರಜಾಸತ್ತಾತ್ಮಕ ವೇದಿಕೆಯೇ - ಅನುಭವ ಮಂಟಪ"

ಇಂದು ವಿಶ್ವದ ಗಮನ ಸೆಳೆಯುತ್ತಿರುವ ದೊಡ್ಡ ದೊಡ್ಡ ದೇಶಗಳೆಲ್ಲ ಹನ್ನೆರಡನೇ ಶತಮಾನದಲ್ಲಿ ಊಳಿಗಮಾನ್ಯ ಪದ್ಧತಿಯಲ್ಲಿ ನರಳುತ್ತಿದ್ದ ಸಂದರ್ಭದಲ್ಲಿ ಭಾರತಾಂಬೆಯ ಉಡಿಯೊಳಗೆ ಪ್ರಜಾಪ್ರಭುತ್ವದ ಹೂದೋಟ ಅರಳಿ ನಳನಳಿಸುತ್ತಿತ್ತು. ಅದರ ರೂವಾರಿ ಮಹಾನ್ ಮಾನವತಾವಾದಿ ಬಸವಣ್ಣನವರು. ಇಂತಹ ಒಂದು ಮುಕ್ತ ಚಿಂತನೆ ಯನ್ನು ಕನ್ನಡ ಮನಸ್ಸು 850 ವರ್ಷಗಳ ಹಿಂದೆಯೇ ಮಾಡಿದೆ ಎನ್ನುವುದು ಕನ್ನಡಿಗರಾದ ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಷಯ. ಅನುಭವ ಮಂಟಪದಲ್ಲಿ ಕೃಷಿಕ, ಕೂಲಿಗಾರ, ಕುಂಬಾರ, ಕಮ್ಮಾರ, ನೇಕಾರ ಎಲ್ಲ ಕಸುಬಿನ ಮಹಿಳೆ ಮತ್ತು ಪುರುಷರಿಗೂ ಮುಕ್ತ ಪ್ರವೇಶವಿರುತ್ತಿತ್ತು. ಸುಮಾರು 770 ಶರಣರು ಪಾಲ್ಗೊಂಡು ತಾವು ದಿನನಿತ್ಯವೂ ಕಂಡು ಅನುಭವಿಸುತ್ತಿದ್ದ ಸಮಾಜದ ಕಟು ಸತ್ಯಗಳನ್ನು ಕುರಿತು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಅದರಿಂದ ತಮಗೆ ದೊರೆತ ಜ್ಞಾನದಿಂದ

ವಚನಗಳನ್ನು ಬರೆಯುತ್ತಿದ್ದರು. ಕನ್ನಡ ನಾಡಿನಿಂದಷ್ಟೇ ಅಲ್ಲದೆ ದೇಶದ ಬೇರೆ ಬೇರೆ ಭಾಗಗಳಿಂದಲೂ ಅಂದರೆ ಗುಜರಾತ್, ಕಾಶ್ಮೀರ, ಆಂಧ್ರ ಪ್ರದೇಶ, ಒಡಿಸ್ಸಾ, ಕೇರಳ , ತಮಿಳುನಾಡು ಗಳಿಂದಲೂ ಬಸವಣ್ಣನವರ ಪ್ರಭಾವಕ್ಕೊಳಗಾಗಿದ್ದ ಶರಣರು ಬಂದು ಅನುಭವ ಮಂಟಪದಲ್ಲಿ ಭಾಗವಹಿಸುತ್ತಿದ್ದರೆಂದು ವಚನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಅನುಭವ ಮಂಟಪದ ಅಧ್ಯಕ್ಷ/ಮುಖ್ಯಸ್ಥರಾಗಿದ್ದವರು" ನಟುವರ" ಎಂಬ ಕೆಳಸ್ತರದ ಸಮುದಾಯಕ್ಕೆ ಸೇರಿದ ಅಲ್ಲಮಪ್ರಭು ಎನ್ನುವುದೇ ಅನುಭವ ಮಂಟಪದ ಮತ್ತು ಬಸವಣ್ಣನವರ ಸಾಮಾಜಿಕ ಕ್ರಾಂತಿಯ ಸೊಬಗು.

ಇಂದು – ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸತ್ತಿನ ಎರಡೂ (ಲೋಕಸಭೆ ಮತ್ತು ರಾಜ್ಯಸಭೆ) ಸದನಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ 795 ಆಗಿದ್ದು ಸದಸ್ಯರು ದೇಶದ ಎಲ್ಲ ಜಾತಿ, ಜನಾಂಗದ, ಧರ್ಮದ ಜನರನ್ನು ಪ್ರತಿನಿಧಿಸುತ್ತಾರೆ. ಅದೇರೀತಿ ವಿವಿಧ ರಾಜ್ಯಗಳನ್ನು ಪ್ರತಿನಿಧಿಸುವ ವ್ಯವಸ್ಥೆ ಇದೆ. ಹನ್ನೆರಡನೆ ಶತಮಾನದ ಅನುಭವ ಮಂಟಪ ಕುರಿತು ಶಿಕ್ಷಣ ತಜ್ಞರೂ , ಭಾರತದ ರಾಷ್ಟ್ರ ಪತಿಗಳೂ ಆಗಿದ್ದ ಡಾ. ಸರ್ವಪಲ್ಲಿ ರಾಧಾ ಕೃಷ್ಣನ್ ಅವರು "ವಿಶ್ವದ ಮೊಟ್ಟ ಮೊದಲ ಧಾರ್ಮಿಕ ಸಂಸತ್ತು –ಅನುಭವ ಮಂಟಪ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಅನುಭವ ಮಂಟಪದ ಕಾರ್ಯ ಚಟುವಟಿಕೆಯ ಬಗೆಗೆ ಬಸವಣ್ಣನವರ ಪತ್ನಿ ನೀಲಲೋಚನೆ ತನ್ನ ಒಂದು ವಚನದಲ್ಲಿ ಈ ರೀತಿ ಉಲ್ಲೇಖಿಸಿದ್ದಾರೆ."…….ಇಪ್ಪತ್ತೈದು ಸಾವಿರ ಚರ್ವಾಕರ ನೆಗ್ಗಲೊತ್ತಿ/ ಅಪ್ರತಿಮ ಶಿವಗಣಂಗಳಂ ಮಹಾತ್ಮೆಯಂ …ಪಡೆದು ಅನುಭವ ಮಂಟಪವನನುಮಾಡಿ/ಅನುಭವಮೂರ್ತಿಯಾದ ನಮ್ಮ ಬಸವಯ್ಯನು" ಈ ವಚನ ಬಸವಣ್ಣನವರು ಜ್ಞಾನ ದಾಸೋಹಕ್ಕಾಗಿ ಸ್ಥಾಪಿಸಿದ್ದ ಅನುಭವ ಮಂಟಪದಲ್ಲಿ ಆಧ್ಯಾತ್ಮದ,ಅನುಭಾವದ ಕುರಿತ ಚರ್ಚೆಗಳು ನಡೆಯುತ್ತಿದ್ದುದರ ಬಗ್ಗೆ ಸ್ಪಷ್ಟ ಉಲ್ಲೇಖವಿದೆ.

**ಲಿಂಗಸಮಾನತೆ:**

ಬಸವಣ್ಣನವರ ನೇತೃತ್ವದಲ್ಲಿ ನಡೆದ ಚಳವಳಿಯ ಬಹು ದೊಡ್ಡ ಕೊಡುಗೆ – ಹೆಣ್ಣು ಗಂಡು ಗಳ ನಡುವೆ ಸಮಾನತೆಯನ್ನು ಎತ್ತಿ ಹಿಡಿಯುವ ಮತ್ತು " ಮಹಿಳೆಯರಿಗೆ ತಮ್ಮ "ಸ್ವಂತಿಕೆ" (individuality) ಮತ್ತು ತಮ್ಮ ಹಕ್ಕು (Rights) ಗಳ ಬಗ್ಗೆ ಅರಿವು ಮೂಡಿಸಿದ್ದುದು. ಲಿಂಗ ಬೇಧವನ್ನ ಪ್ರಶ್ನಿಸುತ್ತ ತಮ್ಮ ವಚನಗಳಿಗೆ ತಾವಿತ್ತುಕೊಂಡ ಅಂಕಿತ ನಾಮಗಳ ಮೂಲಕವೂ ಹೆಣ್ಣು ಗಂಡು, ಮೇಲು ಕೀಳು ಎಂಬ ಅಸಮಾನತೆಯನ್ನು ಧಿಕ್ಕರಿಸಿದ್ದಾರೆ. ಆಯ್ದಕ್ಕಿ ಲಕ್ಕಮ್ಮ, ಅಂಬಿಗರ ಚೌಡಯ್ಯ, ಸತ್ಯಕ್ಕ ಮೊದಲಾದವರ ವಚನಗಳಲ್ಲೂ "ಮೊಲೆ ಮುಡಿಬಂದಡೆ ಹೆಣ್ಣೆಂಬರು, ಗಡ್ಡ ಮೀಸೆ ಬಂದಡೆ ಗಂಡೆಂಬರು/ ಒಳಗೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ" ಇಂತಹದೆ ಭಾವನೆಗಳು ವ್ಯಕ್ತವಾಗಿದ್ದು ಶಾರೀರಿಕವಾದ ಮತ್ತು ಜೈವಿಕವಾದ

ಭಿನ್ನತೆಗಳಿಂದಾಗಿ ಹೆಣ್ಣು ಮತ್ತು ಗಂಡುಗಳ ನಡುವೆ ವ್ಯತ್ಯಾಸವನ್ನು ಕಾಣಬಹುದೇ ಹೊರತು ಇಬ್ಬರ ಆತ್ಮ ಮಾತ್ರ ಒಂದೇ ಆಗಿದೆ ಎಂಬ ಸಾರ್ವಕಾಲಿಕ ಸತ್ಯವನ್ನು ಪ್ರತಿಪಾದಿಸುವ ಮೂಲಕ ಲಿಂಗ ಸಮಾನತೆಯನ್ನು ಒತ್ತಿ ಹೇಳಿದ್ದಾರೆ. ಇದಕ್ಕೆ ಉದಾಹರಣೆಯಾಗಿ " ನಿರ್ಲಜ್ಜೇಶ್ವರ" ಎಂಬ ಸೂಳೆ ಸಂಕವ್ವೆಯ ಅಂಕಿತನಾಮವನ್ನು ಗಮನಿಸಬಹುದು. ಅಲ್ಲದೆ ದಲಿತ ವಚನಕರ್ತಿ ಕಾಳವ್ವೆ ತನ್ನ ವಚನಗಳಲ್ಲಿ ಮೇಲ್ವರ್ಗದವರ ದಬ್ಬಾಳಿಕೆಯನ್ನು ತೀವ್ರವಾಗಿ ಖಂಡಿಸುತ್ತ ತನ್ನ ಸ್ವಾಭಿಮಾನದ ದನಿ ಎತ್ತಿದ್ದಾಳೆ.

ಇಂದು – 2011 ರ ಜನಗಣತಿಯ ಪ್ರಕಾರ ನಮ್ಮ ದೇಶದ ಲಿಂಗಾನುಪಾತ ಪ್ರಮಾಣ 1000 ಪುರುಷರಿಗೆ 943 ಮಹಿಳೆಯರು ಮಾತ್ರ ಇದ್ದಾರೆ. ಇಂದಿನ ಸಮಾಜದಲ್ಲಿ ನಾವು ಕಾಣುತ್ತಿರುವ ಸಾಮಾಜಿಕ ಪಿಡುಗುಗಳಾದ ಹೆಣ್ಣು ಭ್ರೂಣ ಹತ್ಯೆ, ದಲಿತರ ಮೇಲಿನ ದಬ್ಬಾಳಿಕೆ, ಜಾತಿ –ಜಾತಿಗಳ ಹಾಗೂ ವರ್ಗ ವರ್ಗಗಳ ನಡುವೆ ಅಂತರ ಹೆಚ್ಚುತ್ತಿರುವುದಕ್ಕೆ ನಿದರ್ಶನ. ಇಪ್ಪತ್ತೊಂದನೆ ಶತಮಾನದ ಆಧುನಿಕ ಹಾಗೂ ಸಂವಿಧಾನಬದ್ಧ ಭಾರತಕ್ಕೂ ಈ ಪಿಡುಗುಗಳನ್ನು ನಿರ್ಮೂಲನೆ ಮಾಡಲು ಇನ್ನೂ ಸಾಧ್ಯವಾಗಿಲ್ಲವೆನ್ನುವುದಕ್ಕೆ ನಮ್ಮ ಸನ್ಮಾನ್ಯ ಪ್ರಧಾನ ಮಂತ್ರಿಗಳು ಈ ವರ್ಷದ ದಸರಾ ಹಬ್ಬದ ಆಚರಣೆಯಲ್ಲಿ ಪಾಲ್ಗೊಂಡು ಜನತೆಯನ್ನು ಉದ್ದೇಶಿಸಿ ಮಾತನಾಡುತ್ತ " ಅಕ್ಷರಸ್ಥ– ಅನಕ್ಷರಸ್ಥ, ಬಡವ–ಶ್ರೀಮಂತ, ಹಿಂದೂ,ಮುಸ್ಲಿಂ ಸಿಖ್ ಕ್ರೈಸ್ತ, ಬೌದ್ಧ ... ಯಾವುದೇ ಸಮುದಾಯದ,ಯಾವುದೇ ಆರ್ಥಿಕ, ಸಾಮಾಜಿಕ ಹಿನ್ನೆಲೆಯವರಿರಲಿ ಹೆಣ್ಣು ಮತ್ತು ಗಂಡು ಮಕ್ಕಳನ್ನು ಸಮಾನರಾಗಿ ಕಾಣಬೇಕು. ಮಹಿಳೆಯರು ಪುರುಷರಂತೆಯೇ ಸಮಾನ ಹಕ್ಕುಗಳನ್ನು ಹೊಂದಬೇಕು" ಎಂದು ನೀಡಿರುವ ಕರೆ ಉತ್ತಮ ಉದಾಹರಣೆ.

ಇಂತಹ ಎಲ್ಲ ಪಿಡುಗುಗಳನ್ನು ನಮ್ಮ ವಚನಕಾರರು ಮುಖ್ಯವಾಗಿ ವಚನಕರ್ತೀಯರು ಹನ್ನೆರಡನೇ ಶತಮಾನದಲ್ಲಿಯೇ ಚಿಂತಿಸಿ, ಪರಸ್ಪರ ಚರ್ಚಿಸಿ ಜಾತಿ,ವರ್ಗ ಮತ್ತು ಲಿಂಗಭೇದಗಳ ವಿಚಾರವಾಗಿ ಅಂದಿನ ಸಮಾಜದಲ್ಲಿ ಬೇರು ಬಿಟ್ಟಿದ್ದ ರೋಗಗ್ರಸ್ಥ ಭಾವನೆಗಳನ್ನು ಬುಡಸಮೇತ ಕಿತ್ತು ಹಾಕುವ ದಿಟ್ಟ ಪ್ರಯತ್ನ ಮಾಡಿದ್ದು ಕನ್ನಡ ನಾಡಿನ ಮಾತ್ರವಲ್ಲ ಭಾರತದ ಚರಿತ್ರೆಯಲ್ಲಿಯೇ ಮಹಿಳಾ ವಿಮೋಚನೆಗಾಗಿ ನಡೆದ ಮೊದಲ ಸಂಘಟಿತ ಹೋರಾಟ ಎಂದರೆ ಅದು ಅತಿಶಯೋಕ್ತಿಯೇನಲ್ಲ. ಆದುದರಿಂದ ಬಸವಣ್ಣನವರ ತತ್ವಗಳ ಪಾಲನೆ ಇವೊತ್ತಿನ ಸಮಾಜಕ್ಕೆ ಅನಿವಾರ್ಯ ಎಂಬುದು ಮನದಟ್ಟಾಗುತ್ತದೆ.

**ಕಾಯಕ:** ಇನ್ನು ಕಾಯಕ ಮತ್ತು ದಾಸೋಹಕ್ಕೆ ಸಂಬಂಧಿಸಿದಂತೆ ಬಸವಣ್ಣನವರು "ಕಾಯಕವೇ ಕೈಲಾಸ" ಎಂಬ ಎಲ್ಲ ಕಾಲಕ್ಕೂ ಒಪ್ಪಿತವಾಗುವ ಶ್ರೇಷ್ಠ ವಚನ ಬರೆದರೆ, "ಕಾಯಕ" ದ ಅರ್ಥವನ್ನು ವ್ಯಾಖ್ಯಾನಿಸಿರುವ, ದಲಿತ

ವಚನಕಾರ್ತಿ ಕಾಳವ್ವೆ " ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ/ ಸತ್ಯ ಶುದ್ಧ ವಿಲ್ಲದುದು ಕಾಯಕವಲ್ಲ......" ಎಂಬ ವಚನದ ಮೂಲಕ ಕಾಯಕ ಮಾಡುವುದು ಅಷ್ಟೇ ಅಲ್ಲ ಮಾಡುವ ಕಾಯಕದಲ್ಲಿ ಶುದ್ಧತೆ ಮತ್ತು ನಿಷ್ಠೆಯಿರಬೇಕು ಎಂಬ ಮಹತ್ವದ ಸಂದೇಶವನ್ನು ಆಯದ ಕಾಯಕದ ಲಕ್ಕಮ್ಮನ "ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?....."" ಈ ವಚನ ದಲ್ಲಿ ನೋಡಬಹುದು . ಆಯದ ಅಕ್ಕಿ ಲಕ್ಕಮ್ಮ ಆಯ ಎಂದರೆ ಕಾಯಕಕ್ಕೆ ಹೆಚ್ಚಿನ ಮಹತ್ವ ಕೊಟ್ಟವರು ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು. ಆಯ ಎಂದರೆ ಕೂಲಿ ಎಂದರ್ಥ. ಅಂದರೆ ಶ್ರಮಕ್ಕೆ ಪ್ರತಿಯಾಗಿ ಆಯಾ ಕೊಡುವುದು ಈಗಲೂ ವಾಡಿಕೆಯಲ್ಲಿದ್ದು ಅದು ಸತ್ಯ ಶುದ್ಧ ಕಾಯಕವಾಗಿದ್ದಿತು. ರೈತರು ಸುಗ್ಗಿ ಸಂದರ್ಭದಲ್ಲಿ ರಾಶಿ ಮಾಡಿದ ಧಾನ್ಯಗಳನ್ನು ಕಂಬಾರರು, ಮಡಿವಾಳರು,ಕ್ಷೌರಿಕರು ಮುಂತಾದವರಿಗೆ "ಆಯ" ನೀಡುತ್ತಾರೆ. ಹೀಗೆ ಒಮ್ಮೆ ಹೆಚ್ಚು ಅಕ್ಕಿಯನ್ನು ಆಯ ತಂದಿದ್ದಕ್ಕಾಗಿ ತನ್ನ ಗಂಡನನ್ನು ಕುರಿತು ಮೇಲಿನ ವಚನ ಹೇಳುವ ಮೂಲಕ ಸತ್ಯ ಶುದ್ಧತೆಯನ್ನು ಮೆರೆದಿದ್ದಾರೆ ಲಕ್ಕಮ್ಮನವರು. ಈ ನೀತಿ ಪಾಠ ಸದಾ ಕಾಲಕ್ಕೂ ಎಲ್ಲ ಮಹಿಳೆ ಮತ್ತು ಪುರುಷರಿಗೂ ಆದರ್ಶವಾಗಿ ಕಂಡುಬರುತ್ತದೆ.

**ದಾಸೋಹ:** ಅದೇ ರೀತಿ "ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು / ಕೋಳಿಯೊಂದು ಗುಟುಕ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು....." ಎಂದು ಪ್ರಾರಂಭವಾಗುವ ದಾಸೋಹ ದ ಮಹತ್ವನ್ನು ಎತ್ತಿ ಹಿಡಿಯುವ ಬಸವಣ್ಣ ನವರ ವಚನದಲ್ಲಿ ಪ್ರಾಣಿ ಪಕ್ಷಿಗಳ ಸಂಕೇತಗಳನ್ನು ಬಳಸಿಕೊಂಡು ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಸಮಾಜದ ಜನರನ್ನು ದಾಸೋಹದ ಕಡೆಗೆ ಸೆಳೆಯುವ ಕೆಲಸ ಮಾಡಿದ್ದಾರೆ. ಇಂತಹ ಶ್ರೇಷ್ಠ ತತ್ವಗಳನ್ನು ನಮ್ಮ ಸಮಾಜ ಮತ್ತು ನಮ್ಮ ಆಡಳಿತ ವ್ಯವಸ್ಥೆ ಅಳವಡಿಸಿಕೊಂಡಿಲ್ಲ ವೆನ್ನುವುದಕ್ಕೆ ಆಗಾಗ್ಗೆ ದಿನಪತ್ರಿಕೆಗಳಲ್ಲಿ ಬರುವ ಈ ಕೆಲವು ಉದಾಹರಣೆಗಳನ್ನು ನೋಡಬಹುದು. 10ಕೋಟಿ ನಕಲಿ ಪಡಿತರ ಚೀಟಿಗಳನ್ನು ರದ್ದು ಪಡಿಸಿದುದರಿಂದಾಗಿ 3ಲಕ್ಷ ಕೋಟಿ ಮೊತ್ತದ ಉಳಿತಾಯ ಆಗಿದೆ ಎಂದು ಇತ್ತೀಚೆಗೆ ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

ಈ ವರದಿ ವಿತರಣೆ ವ್ಯವಸ್ಥೆಯಲ್ಲಿದ್ದ ಲೋಪದೋಷ ವನ್ನು ಎತ್ತಿಹಿಡಿದರೆ, ಇನ್ನೊಂದು ವರದಿ ಭಾರತೀಯ ಆಹಾರ ನಿಗಮಗಳಿಂದ ಕಳುವಾಗಿರುವ ಆಹಾರದ ಪ್ರಮಾಣ– 143.74 ಟನ್ನುಗಳು. ದೇಶದೆಲ್ಲಡೆ ಇರುವ ವಿವಿಧ ಭಾರತೀಯ ಆಹಾರ ನಿಗಮಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೊಳೆತು ಹಾಳಾಗಿರುವ ಆಹಾರ ಧಾನ್ಯಗಳ ಪ್ರಮಾಣ 46,558 ಟನ್ ಗಳು. ಕಳವು ಮಾಡಿದ ಮತ್ತು ಕೊಳೆತು ಹೋದ ಧಾನ್ಯಗಳಿಂದ ದೇಶದ 8 ಲಕ್ಷ ಜನರಿಗೆ ಆಹಾರ ಒದಗಿಸಬಹುದಾಗಿತ್ತು ಎಂದು

ಅಂದಾಜಿಸಲಾಗಿದೆ.

ಐದು ವರ್ಷದೊಳಗಿನ ಶೇಕಡ 44 ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದರೆ, ಶೇಕಡಾ 72 ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ ಎಂದು ಅಧಿಕೃತ ವರದಿಗಳು ತಿಳಿಸುತ್ತವೆ. ಹೀಗಿರುವಾಗ ಸರ್ಕಾರಿ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತೋರಿದ ಅಲಕ್ಷ್ಯತನದಿಂದಾಗಿ ದೇಶಕ್ಕೆ ಆದ ನಷ್ಟವನ್ನು ಸೂಚಿಸುತ್ತದೆ.

ಇಂತಹ ಸಂದರ್ಭಗಳಲ್ಲಿ ನಾವು ವಚನಕಾರರು ಕನ್ನಡ ಪರಂಪರೆಗೆ ವಚನ ಸಾಹಿತ್ಯ ನೀಡಿದ ಅಮೂಲ್ಯ ತತ್ವಗಳಾದ ಕಾಯಕ ಮತ್ತು ದಾಸೋಹ ತತ್ವಗಳನ್ನು ಅರ್ಥ ಮಾಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕಾಣುತ್ತೇವೆ.

ಇವುಗಳಲ್ಲದೆ ಬಸವಣ್ಣನವರ "ದಯವಿಲ್ಲದ ಧರ್ಮವದೇವುದಯ್ಯ ದಯವೇ ಧರ್ಮದ ಮೂಲವಯ್ಯ..." ಎಂಬ ವಚನ ಇವೊತ್ತಿನ ಭಯೋತ್ಪಾದನೆ, ಕೊಲೆ ಸುಲಿಗೆ, ಹಿಂಸಾಚಾರಗಳಲ್ಲಿ ತೊಡಗಿ ತಮ್ಮ ಸುಂದರ ಬದುಕನ್ನು ಹಾಳು ಮಾಡಿಕೊಳ್ಳುತ್ತಿರುವ ವಿಕೃತ ಮನಸ್ಸುಗಳಿಗೆ ಉತ್ತಮ ಸಂದೇಶದಂತಿದೆ.

ಹಾಗೆಯೆ "ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂದು ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂದು..." ವಚನದ ಮೂಲಕ ಇಂದಿನ ಆರ್ಥಿಕ ಮತ್ತು ರಾಜಕೀಯ ಆಡಳಿತ ವ್ಯವಸ್ಥೆಯಾ ಯಂತ್ರದ ಮಹಾಮಾರಿಗಳಾದ ಲಂಚಗುಳಿತತನ ಮತ್ತು ಭ್ರಷ್ಟಾಚಾರಗಳಲ್ಲಿ ತೊಡಗಿರುವವರಿಗೆ ಕಿವಿ ಹಿಂಡಿ ಎಚ್ಚರಿಸುವಂತಿದೆ.

"ಇವನರಾವ ಇವನಾರವ ಇವನಾರವ ಎಂದೆನಿಸದಿರಯ್ಯಾ / ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ ..." ಎಂಬ ಈ ವಚನ ವಿಶ್ವ ಬ್ರಾತೃತ್ವವನ್ನು ಸಾರುವ ವಚನವಾಗಿದೆ.

ಸಾಹಿತ್ಯಿಕವಾಗಿ ಹೇಳುವುದಾದರೆ, ಪಂಡಿತೋತ್ತಮರ ಸ್ವತ್ತಾಗಿದ್ದ ಸಂಸ್ಕೃತ ಭಾಷೆಯನ್ನು ರಾಜ ಸಿಂಹಾಸನದಲ್ಲಿ ರಾರಾಜಿಸುತ್ತಿದ್ದುದಲ್ಲದೆ, ರಾಜಾಶ್ರಯದಲ್ಲಿದ್ದ ಆಸ್ಥಾನ ಕವಿಗಳು ತಮ್ಮ ಆಶ್ರಯದಾತನಾದ ರಾಜನನ್ನೇ ಮಹಾಕಾವ್ಯದ ನಾಯಕರುಗಳಿಗೆ ಹೋಲಿಸಿ ಅಷ್ಟಾದಶ ವರ್ಣನೆಗಳಿಂದ ಕೂಡಿದ ಚಂಪೂ ಕಾವ್ಯಗಳ ರಚನೆಯಾಗುತ್ತಿತ್ತು.

ಆದರೆ ಜನಸಾಮಾನ್ಯರ ಹೃದಯ ಸಿಂಹಾಸನದಲ್ಲಿ ವಿರಾಜಿಸುತ್ತಿದ್ದ ಕನ್ನಡ ಭಾಷೆಯಲ್ಲಿ ಜನಸಾಮಾನ್ಯರ ದನಿಗೆ, ಭಾವನೆಗೆ ಲೇಖನಿಯಸ್ಪರ್ಶ ನೀಡುವ ಅಗತ್ಯತೆ ಇದ್ದು ಅದಕ್ಕಾಗಿ ಪರಿವರ್ತನೆ ತರುವುದು ಅಗತ್ಯವಾಗಿತ್ತು ಭೂಮಿಕೆಯೊಂದು ಅಗತ್ಯವಾಗಿತ್ತು. ಜನಭಾಷೆಯನ್ನು ಸಾಹಿತ್ಯದ ಸಿಂಹಾಸನದಲ್ಲಿ ಕುಳ್ಳಿರಿಸಿ ಜನರ ಅನುಭವಗಳನ್ನೇ ಸಾಹಿತ್ಯದ ವಸ್ತುವನ್ನಾಗಿ ಪರಿವರ್ತನೆ ಮಾಡಬೇಕಾದ ಅಗತ್ಯವಿತ್ತು.

ಸಂಸ್ಕೃತಭೂಯಿಷ್ಠವಾದ ಛಂದೋ ವೃತ್ತಗಳು ಕಂದಪದ್ಯಗಳಿಂದ ತುಂಬಿರುತ್ತಿದ್ದ, ರಾಜಾಶ್ರಯ ನೀಡಿದ ಅರಸನನ್ನು ಪುರಾಣ ಕಾವ್ಯಗಳ ನಾಯಕರ ಜೊತೆ ಹೋಲಿಸಿದ ವಸ್ತುವನ್ನುಳ್ಳ ಚಂಪೂಕಾವ್ಯಗಳ ಬದಲು, ಶ್ರೀ ಸಾಮಾನ್ಯ ಜನರ ನಿತ್ಯ ಬದುಕಿನ ಅನುಭವಗಳನ್ನು ವಸ್ತುವನ್ನಾಗಿಸಿಕೊಂಡಂತಹ ಯಾವುದೇ ಛಂದಸ್ಸಿನ ನಿಯಮಗಳ ಕಟ್ಟು ಪಾಡುಗಳಿಗೆ ಒಳಗಾಗದ ವಚನಗಳ ರಚನೆ ಕನ್ನಡ ಸಾಹಿತ್ಯಲೋಕದ ಅದ್ಭುತ ಸೃಷ್ಟಿ. ವಚನಕಾರರು ಬರೆದ ಈ ವಚನಗಳಲ್ಲಿ ಪ್ರತಿಯೊಬ್ಬ ಸಾಮಾನ್ಯ ಕನ್ನಡಿಗನಿಗೂ ಅರ್ಥವಾಗಬಲ್ಲ ಸರಳ ಅಭಿವ್ಯಕ್ತಿಯಿದ್ದು ಕನ್ನಡ ಸಾಹಿತ್ಯದ ದೃಷ್ಟಿಯಿಂದಲೂ ವಚನ ಸಾಹಿತ್ಯ ಅತ್ಯಂತ ಶ್ರೇಷ್ಟವಾದುದ್ದಾಯಿತು. ಶಾಂತರಸ ಎಂಬ ವಚನ ಭಂಡಾರಿಯು ಶರಣರು ಬರೆದ ವಚನಗಳನ್ನು/ ಮೌಖಿಕವಾಗಿ ಅಭಿವ್ಯಕ್ತಿಸಿದ ವಚನಗಳನ್ನು ಬರೆದು ಸಂಗ್ರಹಿಸಿಡುವ ಕಾಯಕದಲ್ಲಿದ್ದನು. ಇತಿಹಾಸ ನಮಗೆ ತಿಳಿಸುವಂತೆ ಬಸವಣ್ಣನವರ ಕಾಲಕ್ಕೂ ಮೊದಲಿನಿಂದಲೂ ಆದ್ಯ ಜೇಡರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ತೆಲುಗು ಜೋಮ್ಮಣ್ಣ ಮೊದಲಾದವರಿಂದ ವಚನಗಳ ರಚನೆಯಾಗಿರುವುದಷ್ಟೇ ಅಲ್ಲದೇ ಅವರೂ ಕೂಡ ಮಹಿಳಾ ಅಸಮಾನತೆ, ಜಾತಿ ಬೇಧ ಇತ್ಯಾದಿ ಸಾಮಾಜಿಕ ಅಸಮಾನತೆಗಳ ಬಗ್ಗೆ ದನಿ ಎತ್ತಿರುವುದು ತಿಳಿದು ಬರುತ್ತದೆ. ವಚನಗಳ ಮತ್ತೊಂದು ವಿಶೇಷತೆ ಏನೆಂದರೆ ಪ್ರತಿಯೋಬ್ಬ ವಚನಕಾರನೂ ತನಗಿಷ್ಟವೆನಿಸಿದ ಅಂಕಿತನಾಮವನ್ನು ಇಟ್ಟುಕೊಂಡು ತಮ್ಮ ವ್ಯಕ್ತಿ ವಿಶಿಷ್ಠತೆಯನ್ನು, ಆ ಮೂಲಕ ಆತ್ಮ ಗೌರವವನ್ನು ಮೆರೆದಿದ್ದಾರೆ. ಲಿಂಗ ಬೇಧವನ್ನ ಪ್ರಶ್ನಿಸುತ್ತ ತಮ್ಮ ವಚನಗಳಿಗೆ ತಾವಿತ್ತುಕೊಂಡ ಅಂಕಿತ ನಾಮಗಳ ಮೂಲಕವೂ ಹೆಣ್ಣು ಗಂಡು, ಮೇಲು ಕೀಳು ಎಂಬ ಅಸಮಾನತೆಯನ್ನು ಧಿಕ್ಕರಿಸಿದ್ದಾರೆ. ಮಹಿಳೆಯ ವಚನಗಳಲ್ಲಿ ಅವರು ತಮ್ಮ ತಮ್ಮ ವೃತ್ತಿಗಳ ಹೆಸರನ್ನೇ ಅಂಕಿತನಾಮವನ್ನಾಗಿರಿಸಿಕೊಂಡಿರುವುದು ಅವರು ಬಸವಣ್ಣನವರ ನೇತೃತ್ವದ ಚಳುವಳಿಯಲ್ಲಿ ಹೊಂದಿದ್ದ ಮುಕ್ತ ಸ್ವತಂತ್ರ ವನ್ನು ಸಂಕೇತಿಸುವುದೂ ಹಾಗಿದೆ. ಉದಾ: "ನಿರ್ಲಜ್ಜೇಶ್ವರ" ಸೂಳೆ ಸಂಕವ್ವಳ ಅಂಕಿತನಾಮ. ವಚನ ಚಳುವಳಿ ಕನ್ನಡ ಸಾಹಿತ್ಯಕ್ಕೆ ವೈವಿಧ್ಯಮಯ ಆಯಾಮವನ್ನು ಹಾಕಿಕೊಟ್ಟದ್ದಲ್ಲದೆ, ಸುಮಾರು 350 ಕ್ಕೂ ಹೆಚ್ಚು ಮಹಿಳೆಯರನ್ನು ಕನ್ನಡ ಸಾರಸ್ವತ ಲೋಕಕ್ಕೆ ಪ್ರವೇಶಿಸುವಂತೆ ಮಾಡಿದ್ದು ಒಂದು ದೊಡ್ಡ ವಿಶೇಷ. ಇದು ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಮಾಡಿದ ದೊಡ್ಡ ಪರಿವರ್ತನೆ. ಏಕೆಂದರೆ ಅದುವರೆಗೆ ಮಹಿಳೆಯರಿಗೆ ಓದಲು, ಬರೆಯುಲು, ತಮಗೆ ಅನ್ನಿಸಿದ್ದನ್ನು ವ್ಯಕ್ತಪಡಿಸಲು ಮುಕ್ತ ಸ್ವಾತಂತ್ರ್ಯವಿರಲಿಲ್ಲ. ಬಸವಣ್ಣನವರ ಚಳುವಳಿ ಅಂತಹ ಸಮಾನತೆಯನ್ನು ಕಲ್ಪಿಸಿಕೊಟ್ಟ ದೊಡ್ಡ ಕ್ರಾಂತಿಕಾರಕ ಘಟನೆಯಾಗಿತ್ತು.

ಆರ್ಥಿಕವಾಗಿ ನೋಡುವುದಾರೆ ಅವೊತ್ತಿನ ಕಾಲಕ್ಕೆ ಕಲ್ಯಾಣವೂ ಸೇರಿದಂತೆ ಪುಲಿಗೆರೆ, ಲಕ್ಷ್ಮೇಶ್ವರ, ಮತ್ತು ಹಂಪೆ ಮೊದಲಾದ ಹಲವು ಪಟ್ಟಣಗಳು ಕರ್ನಾಟಕದ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. ರಾಜನ ಬೊಕ್ಕಸಕ್ಕೆ ಸಲ್ಲಬೇಕಾದ ತೆರಿಗೆ,

ಕಂದಾಯ ಹಣಗಳು ಮಧ್ಯವರ್ತಿಗಳ ಪಾಲಾಗುತ್ತಿತ್ತು

ರಾಜಕೀಯ ಸನ್ನಿವೇಶ ನೋಡುವುದಾರೆ ಚಾಳುಕ್ಯರ ಮಾಂಡಳಿಕನಾಗಿದ್ದ ಬಿಜ್ಜಳ ಸ್ವತಂತ್ರನಾಗಿ ಕಳಚೂರಿ ವಂಶದ ದೊರೆಯಾಗಿದ್ದನು. ಅವನ ಆಸ್ಥಾನದಲ್ಲಿ ಬಸವಣ್ಣನವರನ್ನು ತನ್ನ ಭಂಡಾರಿಯನ್ನಾಗಿ ಮಾಡಿಕೊಂಡಿದ್ದನು.

ಆ ವೇಳೆಗಾಗಲೇ ಕರಣಿಕನಾಗಿದ್ದ ಅನುಭವ ಪಡೆದಿದ್ದ ಬಸವಣ್ಣನವರಿಗೆ ರಾಜ್ಯದ ಆರ್ಥಿಕ ಪರಿಸ್ಥಿತಿ, ಕಂದಾಯ, ತೆರಿಗೆಗಳ ಸೋರಿಕೆಗಳ ಬಗ್ಗೆ ಸಹಜವಾಗಿ ತಿಳುವಳಿಕೆಯಿದ್ದಿತೆಂಬುದನ್ನು ಯಾರಾದರೂ ಅರ್ಥಮಾಡಿಕೊಳ್ಳಬಹುದು. ಹಾಗಾಗಿ ಭಂಡಾರದ ಜವಾಬ್ದಾರಿಯನ್ನು ಹೊತ್ತಿದ್ದ ಬಸವಣ್ಣನವರು ವ್ಯಾಪಾರಿಗಳಿಂದ ರಾಜನ ಬೊಕ್ಕಸಕ್ಕೆ ಸಂದಾಯವಾಗಬೇಕಿದ್ದ ಹಣವನ್ನು ನೇರವಾಗಿ ಖಜಾನೆಗೆ ಒಪ್ಪಿಸುವಂತೆ ಅವರ ಮನಃಪರಿವರ್ತನೆ ಮಾಡಲು ಅಗತ್ಯವಾದ ಸರಳ, ಶುದ್ಧ, ನಿಷ್ಕಪಟ ಬದುಕನ್ನು ಸ್ವತ: ಬದುಕಿ ಮಾದರಿಯನ್ನು ಹಾಕಿಕೊಟ್ಟರು. ಇದರಿಂದ ಜನರ ಮನಸ್ಸು ಪರಿವರ್ತನೆಯಾಗಿ, ಖಜಾನೆಗೆ ಹೆಚ್ಚು ಹೆಚ್ಚು ಧನರಾಶಿ ಹರಿದು ಬಂದು ಆರ್ಥಿಕವಾಗಿ ಸುಭಿಕ್ಷೆ ನೆಲೆಗೊಳ್ಳಲು ಕಾರಣವಾಗಿತ್ತು.

ಇವೊತ್ತಿನ ಆಧುನಿಕ ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಎದುರಿಸುತ್ತಿರುವ ಆರ್ಥಿಕ, ರಾಜಕೀಯ, ಸಾಮಾಜಿಕ ಕ್ಷೇತ್ರದ ಬಹುತೇಕ ಸಮಸ್ಯೆಗಳನ್ನು ಕುರಿತು ವಚನಕಾರರು ಅನೌಪಚಾರಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತಿದ್ದ ಅನುಭವ ಮಂಟಪದಲ್ಲಿ 900 ವರ್ಷಗಳ ಹಿಂದೆಯೇ ಅತ್ಯಂತ ಮುಕ್ತವಾಗಿ, ನಿದ್ರಾಕ್ಷಿಣ್ಯವಾಗಿ ಚರ್ಚಿಸಿದ್ದಾರೆ. ಹೊಸ ಸಮಾಜ ನಿರ್ಮಾಣದ ಕನಸನ್ನು ಕಂಡ ವಚನ ಚಳುವಳಿಯಲ್ಲಿ ಮಹಿಳೆಯರು, ದಲಿತರು ಎನ್ನದೆ ಎಲ್ಲರೂ ಕೂಡಿ ಕಂಕಣ ಬದ್ಧರಾಗಿ ಶ್ರಮಿಸಿದ್ದರೆಂಬುದೇ ಕನ್ನಡ ಸಂಸ್ಕೃತಿಯ ಮತ್ತು ಕನ್ನಡ ಪರಂಪರೆಯ ಹೆಮ್ಮೆ.

"ಕನ್ನಡದ ನಿಜವಾದ ಶಕ್ತಿ ಇರುವುದು ಅದರ ಮುಕ್ತ ಹಾಗೂ ವಿಶಿಷ್ಟ ಚಿಂತನೆಯಲ್ಲಿ". ಹನ್ನೆರಡನೆಯ ಶತಮಾನದ ಶರಣರ ಚಿಂತನೆಯಲ್ಲಿ ಅರಳಿದ ಈ ವಚನಗಳು ಕನ್ನಡದ ಬದುಕಿನ ಅಸಲಿತನದ ಅಭಿವ್ಯಕ್ತಿಗಳು ಎಂದರೆ ಬಹುಶ ತಪ್ಪಾಗಲಾರದು. ವಚನ ಸಾಹಿತ್ಯದ ಮೂಲಕ ಮೊಟ್ಟ ಮೊದಲ ಬಾರಿಗೆ ಕನ್ನಡ ಪ್ರಜ್ಞೆಗೆ ವಿಶ್ವ ಪ್ರಜ್ಞೆಯಾಗಬಲ್ಲ ಕಸುವು ಮತ್ತು ಚೆಲುವು ಎರಡೂ ಇದೆ ಎಂಬ ಘಂಟಾಘೋಷವನ್ನು ವಚನಕಾರರು ಮೊಳಗಿಸಿದ್ದಾರೆ.

**ಮುಂದು:**

ಬಸವಣ್ಣನವರ ನೇತೃತ್ವದ ವಚನ ಚಳುವಳಿ ಹನ್ನೆರಡನೆ ಶತಮಾನದಲ್ಲಿ ನಡೆಸಿದ ಕ್ರಾಂತಿಯ ಇವೊತ್ತಿನ ಇಪ್ಪತ್ತನೆ ಶತಮಾನದ ಸವಾಲುಗಳಾದ ಮಹಿಳಾ

ಅಸಮಾನತೆ, ಅಸ್ಪೃಶ್ಯತೆ, ಜಾತಿ ವರ್ಗಗಳ ಕಲಹ, ಭ್ರಷ್ಟಾಚಾರ, ಭಯೋತ್ಪಾದನೆ, ಪರಿಸರ ಸಂರಕ್ಷಣೆ ಇತ್ಯಾದಿಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಹೇಗೆ ಪ್ರಸ್ತುತವಾಗಿದೆ ಎಂಬುದನ್ನು ಈಗಾಗಲೇ ವಿವರಿಸಲಾಗಿದೆ. ಮುಖ್ಯವಾಗಿ ಇಂದು ಅಮೆರಿಕಾದ ಅಧ್ಯಕ್ಷರಾಗಿ ಚುನಾಯಿತ ರಾಗಿರುವ ಡೊನಾಲ್ಡ ಟ್ರಂಪ್ ಅವರ ಆಡಳಿತ ನೀತಿ, ಸಂಕುಚಿತ ಮನೋಭಾವ, ಮತ್ತೊಂದೆಡೆ ಐಸಿಸ್ ಭಯೋತ್ಪಾದಕರು ಇವರೆಲ್ಲರಿಂದಾಗಿ ಇಡೀ ಅಂತರರಾಷ್ಟ್ರೀಯ ಮಟ್ಟದಲ್ಲಿ ಹುಟ್ಟು ಹಾಕಿರುವ ಆತಂಕ, ಭಯಾನಕ ವಾತಾವರಣವನ್ನು ಗಮನಿಸಿದಾಗ ಇಂದು ನಮ್ಮ ಭಾರತ ದೇಶಕ್ಕೆ ಮಾತ್ರವಲ್ಲ ಇಡೀ ಜಗತ್ತಿಗೆ ಬಸವಣ್ಣನವರ ತತ್ವಗಳನ್ನು ಜರೂರಾಗಿ ತಿಳಿಸಿಕೊಡಬೇಕಾದ ಅಗತ್ಯವಿದೆ.

ಇನ್ನು ಕನ್ನಡ ಭಾಷೆಯ ದೃಷ್ಟಿಯಿಂದ ನೋಡುವುದಾದರೆ ವಚನ ಸಾಹಿತ್ಯ ಕನ್ನಡ ಸಾಹಿತ್ಯದ ವಿಶಿಷ್ಟ ಕೊಡುಗೆಯಾಗಿರುವುದು ಮತ್ತು ಬಸವಣ್ಣನವರು ಕಟ್ಟಿದ ಲಿಂಗಾಯತ ಧರ್ಮ ಕನ್ನಡ ನಾಡಿನ ಸ್ವತಂತ್ರ ಧರ್ಮ ಆಗಿರುವುದರಿಂದ ಕನ್ನಡದ ಕಸುವು ಚೆಲುವುಗಳನ್ನು ಅರಿತುಕೊಳ್ಳು ಕನ್ನಡ ಭಾಷೆಯನ್ನು ಆಧುನಿಕ ತಂತ್ರಜ್ಞಾನಗಳ ಮೂಲಕ ಚೆನ್ನಾಗಿ ಕಲಿಯುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಿದರೆ ವಚನಗಳನ್ನು ಇನ್ನೂ ಹೆಚ್ಚು ಹೆಚ್ಚು ಪ್ರಚಾರ ಮಾಡಲು ಸಾಧ್ಯ. ಇದರ ಜೊತೆಗೆ ವಚನಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಲು ಸಂಗೀತ, ನೃತ್ಯ, ಅಲ್ಲದೆ ಅಂತರ್ಜಾಲಗಳ ಮೂಲಕ ಆಧುನಿಕ ಸಮೂಹ ಹಾಗೂ ಸಾಮಾಜಿಕ ಮಾಧ್ಯಮಗಳ ನೆರವಿನಿಂದ ಪ್ರತಿಯೊಬ್ಬ ಕನ್ನಡಿಗ ಸೇರಿದಂತೆ ಭಾರತೀಯರೆಲ್ಲರಿಗೂ ಹಾಗೂ ಜಗತ್ತಿನ ಇತರೆ ಎಲ್ಲರಿಗೂ ಪ್ರಚಾರ ಮಾಡಬೇಕಾದ ಅಗತ್ಯವಿದೆ. ಈ ನಿಟ್ಟಿಲ್ಲಿ ಶಾಲಾ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಮಕ್ಕಳಿಗೆ ಪ್ರತಿ ಹಂತದಲ್ಲು ಪಠ್ಯ ಪುಸ್ತಕಗಳ ಮೂಲಕ ಕಲಿಯುವಂತೆ ಮಾಡುವುದು, ಪ್ರತಿ ವರ್ಷ ಗ್ರಾಮ – ಜಿಲ್ಲಾ– ರಾಜ್ಯ– ರಾಷ್ಟ್ರ ಮಟ್ಟದವರೆಗೆ ವಚನ ಗಾಯನ, ವಚನ ನೃತ್ಯ, ವಚನ ವಾಚನ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ನಾಡಿನ ದೇಶದ, ಜಗತ್ತಿನ ಪ್ರತಿಯೊಂದು ಮೂಲೆ ಮೂಲೆಯ ಜನರಿಗೂ ಬಸವಣ್ಣನವರ ವಚನ ಚಳುವಳಿಯ ಸಂದೇಶಗಳನ್ನು ತಲುಪಿಸಿ ಜನಮಾನಸದಲ್ಲಿ ಆತ್ಮ ಪರಿವರ್ತನೆ, ಆ ಮೂಲಕ ಸಮಾಜ ಪರಿವರ್ತನೆ, ಮತ್ತು ದೇಶವಾಸಿಗಳ ಚಿಂತನೆಗಳಲ್ಲಿ ಹೊಸ ತನ ಧನಾತ್ಮಕ ಚಿಂತನೆಗಳನ್ನು ತರುವ ಪ್ರಯತ್ನವನ್ನು ಅತ್ಯಂತ ಶ್ರದ್ಧೆ ವಹಿಸಿ ಮಾಡಬೇಕಿದೆ.

ಆಗ ಮಾತ್ರ ವಿಶ್ವಗುರು ಬಸವಣ್ಣ 12ನೇ ಶತಮಾನದಲ್ಲಿನ ಸಮಾಜ ಸುಧಾರಣೆಗೆ ಮಾಡಿದ ಪ್ರಯತ್ನ ಇಂದಿನ 21 ನೇ ಶತಮಾನದಲ್ಲಿ ಸಾರ್ಥಕವಾಗುವಂತೆ ನೆರವೇರಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಅರುಂಧತಿ ಎಫ್. ಬದಾಮಿ. (2025). ವಚನ ಸಾಹಿತ್ಯದಲ್ಲಿ ಪರಂಪರೆ ಮತ್ತು ಆಧುನಿಕತೆ. ಅಕ್ಷರಸೂರ್ಯ (AKSHARASURYA), 7(03 (Special Issue), 23 to 33.
2. ಮನುಕುಮಾರ್ ಎಸ್.ವಿ. (2025). ವಚನ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ. ಅಕ್ಷರಸೂರ್ಯ (AKSHARASURYA), 6(04), 49 to 55.
3. ಕುಮಾರ ಹೆಚ್.ಸಿ. (2025). ವಚನ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು. ಅಕ್ಷರಸೂರ್ಯ (AKSHARASURYA), 6(04), 19 to 26.
4. ನಾರಾಯಣ ಪಿ.ವಿ., (2008) ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ, ವಸಂತ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.